ಘಟಪ್ರಭಾ ನದಿಯನ್ನು ಕಾಲುವೆ ಎಂದು ಪರಿಗಣಿಸಿ ನೀರೆತ್ತಲು ಮಂಜುರಾತಿ

2452 - ಶ್ರೀ ಬಾಬಾಗೌಡ ಪಾಟೀಲ (ಕಿತ್ತೂರು) : ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಹಿಡಕಲ್ ಜಲಾಶಯದಿಂದ ಕೊಣ್ಣೂರ್ ಬಾಂದರಾದವ್‌ರ್‌ಗೆ ನದಿಯನ್ನೇ ಕಾಲುವೆಯೆಂದು ನೀರೆತ್ತಲು ಮಂಜೂರಾತಿ ಕೊಡುತ್ತಿಲ್ಲವೆಂಬುದು ಸರ್ಕಾರಕ್ಕೆ ತಿಳಿದಿದೆಯೇ?

ಆ) ಇದೇ ಹಾದಿಯಲ್ಲಿ ಹಿರಣ್ಯಕೇಶಿ ನದಿಯು ಘಟಪ್ರಭಾಕ್ಕೆ ಬಂದು ಕೂಡುತ್ತಿರುವುದರಿಂದ ನೀರೆತ್ತಲು ಮಂಜೂರಾತಿ ನೀಡದೇ ಇರುವುದು ನ್ಯಾಯಸಮ್ಮತವೆ?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು)

ಅ) ತಿಳಿದಿದೆ

ಆ) ಹಿಡಕಲ್ ಜನಾಶಯದಿಂದ ಘಟಪ್ರಭಾ ಎಡದಂಡೆ ಕಾಲುವೆಯ ಅಚ್ಚುಕಟ್ಟಿಗಾಗಿ ಸೆಪ್ಟೆಂಬರ್ ಅಕ್ಟೋಬರ್ ತಿಂಗಳಲ್ಲಿ ನದಿಗೆ ನೀರು ಬಿಡಲಾಗುವುದು ನದಿಯ ಈ ರೀಚಿನಲ್ಲಿ ನೀರೆತ್ತಲು ಪರವಾನಾಗಿ ಕೊಟ್ಟಿಲ್ಲ ಘಟಪ್ರಭಾ ಎಡದಂಡೆ ಕಾಲುವೆಯಡಿ ಬರುವ ಅಚ್ಚುಕಟ್ಟಿಗೆ ನೀರಿನ ಕೊರತೆ ವುಂಟಾಗುವುದಲ್ಲದೇ ಹತ್ತಿರದ ಗ್ರಾಮಗಳಿಗೆ ಕುಡಿಯುವ ನೀರಿನ ಅಭಾವ ವುಂಟಾಗಬಹುದಾದ್ದರಿಂದ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ.

ಮಹಾದಾಯಿ ಯೋಜನೆಯಿಂದ ಸೌಲಭ್ಯ

2455 - ಶ್ರೀ ಬಾಬಾಗೌಡ ಪಾಟೀಲ್ (ಕಿತ್ತೂರು): ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಮಹಾದಾಯಿ ಯೋಜನೆಯಿಂದ ಯಾವ ಯಾವ ತಾಲ್ಲೂಕ್‌ಗಳಿಗೆ ನೀರಾವರಿ ಸೌಲಭ್ಯ ಆಗುತ್ತಿದೆ.

ಆ) ಈ ಯೋಜನೆಗೆ 1991-92ರ ಆಯವ್ಯಯದಲ್ಲಿ ಎಷ್ಟು ಹಣ ತೆಗೆದಿರಿಸಲಾಗಿದೆ?

ಶ್ರೀ ಮಲ್ಲಾರಿಗೌಡ ಎಸ್.ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು)

ಅ) ಈ ಯೋಜನೆಯಿಂದ ಮಲಪ್ರಭಯೋಜನೆಯ ಜಲಾಶಯಕ್ಕೆ 9 ಟಿ.ಎಂ.ಸಿ. ಪ್ರಮಾಣದ ನೀರನ್ನು ಪೂರೈಸುವುದೇ ಹೊರತು ಇದರಡಿ ಹೊಸ ಅಚ್ಚುಕಟ್ಟು ಬರುವುದಿಲ್ಲ.

ಆ) 1991-92ನೇ ಸಾಲಿನಲ್ಲಿ ಆಯವ್ಯಯದಲ್ಲಿ ಈ ಯೋಜನೆಗೆ ಹಣ ಒದಗಿಸಿರುವುದಿಲ್ಲ.

ಉಳ್ಳಾಲ ಕಡಲು ಕೊರೆತದ ಭೀಕರತೆಯ ಕುರಿತು

2481 - ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ): ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ದಕ್ಷಿಣ ಕನ್ನಡದ ಉಳ್ಳಾಲದಲ್ಲಿ ಕಳೆದ 4 ವರ್ಷಗಳಿಂದ ಕಡಲು ಕೊರೆತ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ, ಮುಖ್ಯವಾಗಿ ಈ ವರ್ಷ ಕಡಲು ಕೊರತ ಭೀಕರವಾಗಿರುವುದನ್ನು ಸರ್ಕಾರ ಪರಿಶೀಲನೆ ಮಾಡಿದೆಯೆ;

ಅ) ಸಂಬಂದಪಟ್ಟ ಸ್ಥಳೀಯ ಅಧಿಕಾರಿಗಳ ನಿಧಾನ ಗತಿಯಿಂದ ತಡೆಗೋಡೆ ಶೀಘ್ರ ಆಗದ್ದರಿಂದ ಅಲ್ಲಿನ ನಿವಾಸಿಗಳಿಗೆ ಹಾನಿ ಆಗಿರುವುದು ನಿಜವಲ್ಲವೆ.

ಇ) ಈ ಬಾರಿ ತಡೆಗೋಡೆ ನಿರ್ಮಾಣ ತುರ್ತಾಗಿ ಬಿರುಸಾಗಿ ನಡೆಯುವುದೇ ಅದಕ್ಕಾಗಿ ಬಿಡುಗಡೆ ಮಾಡಲಾದ ಹಣ ಎಷ್ಟು?

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು)

ಅ) ಬಂದಿದೆ. ಪರಿಶೀನೆ ಮಾಡಿದೆ.

ಆ) ನಿಜವಲ್ಲ

ಇ) ತುರ್ತು ತಡೆಗೋಡೆ ಕೆಲಸ ಕೂಡಲೇ ತೆಗೆದುಕೊಂಡು ಕೆಲಸ ನಡೆಯುತ್ತಿದೆ. ಈ ಬಗ್ಗೆ ರೂ 31.40 ಲಕ್ಷ ವೆಚ್ಚ ಮಾಡಲಾಗಿದೆ.

ಸೇಡಂ ಮತ ಕ್ಷೇತ್ರದ ತಾಲ್ಲೂಕಿನಲ್ಲಿ ಕಡಿಯುವ ನೀರಿನ ಸಮಸ್ಯಾತ್ಮಕ ಗ್ರಾಮಗಳು

2440- ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಗ್ರಾಮೀಣಾಬಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1) ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ಪಾಖಾಲ, ಕಿಷ್ಟಾಪೂರ ಹಾಗೂ ತೆಲಕೂರು ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯಾತ್ಮಕ ಗ್ರಾಮಗಳೆಂದು ಸರ್ಕಾರದ ಗಮನಕ್ಕೆ ಬಂದಿದ್ದರೂ ಸಹ ಇಲ್ಲಿಯವರೆಗೆ ಕುಡಿಯುವ ನೀರಿನ ವ್ಯವಸ್ಥೆಯಾಗಿಲ್ಲವೇಕೆ?

2) ಈ ಕೆಲಸಗಳು ಈಗ ಯಾವ ಹಂತದಲ್ಲಿವೆ?

3) ಈ ಕೆಲಸಗಳನ್ನು ವಿಳಂಬಗೊಳಿಸಿದ್ದಕ್ಕೆ ಕಾರಣವೇನು?

4) ಎಂದಿನಿಂದ ನೀರು ಸರಬರಾಜು ಮಾಡಲಾಗುವುದು?

ಶ್ರೀ ಕೆ.ಹೆಚ್. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯ ಸಚಿವರು)

ಅ) **ಪಾಖಾಲ : ಎರಡು ಕೊಳವೆ ಬಾವಿಗಳಿದ್ದು ಬತ್ತಿಹೋಗಿವೆ.** 1991ರ ಮೇ ತಿಂಗಳಿನಲ್ಲಿ ಅಭಾವ ಪರಿಹಾರದಡಿಯಲ್ಲಿ ಒಂದು ಕೊಳವೆ ಬಾವಿಯನ್ನು ಕೊರೆದು ಕೈ ಪಂಪನ್ನು ಅಳವಡಿಸಲಾಗಿದೆ. ಇದು ಸರಿಯಾಗಿ ಕೆಲಸ ನಿರ್ವಹಿಸುತ್ತಿದೆ. ಈ ಗ್ರಾಮಕ್ಕೆ ಕಿರು ನೀರು ಸರಬರಾಜು ಯೋಜನೆ ಮಂಜೂರಾಗಿದೆ.

ಕಿಷ್ಟಾಪುರ : ಐದು ಕೊಳವೆ ಭಾವಿಗಳಿದ್ದು ಎರಡು ಕೊಳವೆ ಬಾವಿಗಳು ಮಾತ್ರ ಬೇಸಿಗೆಯಲ್ಲಿ ಕೆಲಸ ಮಾಡುತ್ತವೆ. ಈ ಗ್ರಾಮಕ್ಕೆ ನಲ್ಲಿ ನೀರು ಸರಬರಾಜು ಯೋಜನೆ ಮಂಜೂರಾಗಿದೆ.

ತೆಲಕೂರು : ಆರು ಕೊಳವೆ ಭಾವಿಗಳು ಸರಿಯಾಗಿ ಕೆಲಸ ನಿರ್ವಹಿಸುತ್ತಿವೆ ಈ ಗ್ರಾಮಕ್ಕೆ ಕಿರು ನೀರು ಸರಬರಾಜು ಯೋಜನೆ ಮಂಜೂರಾಗಿದೆ.

2) **ಪಾಖಾಲ** : ಜನಮೂಲ ಗುರುತಿಸಲಾಗಿದೆ. ಏರು ಕೊಳವೆ ಮಾರ್ಗದ ಕೆಲಸ ಪ್ರತಿಶತ 90 ರಷ್ಟು ಮುಗಿದಿದೆ.

ಕಿಷ್ಟಾಪುರ : ಅಂದಾಜು ಪಟ್ಟಿಯನ್ನು ಸಿದ್ಧಪಡಿಸಲಾಗಿದೆ. ಮಂಜೂರಾತಿಗಾಗಿ ಸಲ್ಲಿಸಲಾಗಿದೆ ಜಲಮೂಲಕ್ಕಾಗಿ ಕೊರೆದ ಕೊಳವೆ ಬಾವಿಯಲ್ಲಿ ಸಾಕಷ್ಟು ನೀರು ದೊರಕಿದೆ.